ಶ್ರೀ ಆರ್.ವಿ.ದೇಶಪಾಂಡೆ : ಇದು ವಿದ್ಯಾರ್ಥಿಗಳ ಪ್ರಶ್ನೆ.

ಶ್ರೀ ಜಗದೀಶ್ ಶೆಟ್ಟರ್ : ನಾನು ಮಾತನಾಡಿದ ಮೇಲೆ ತೆಗೆದುಕೊಳ್ಳಿ ಬೇಡವೆನ್ನುವುದಿಲ್ಲ, ನಾನು ಮಾತನಾಡಲು ಆರಂಭಿಸುತ್ತೇನೆ, ನನ್ನದಾದ ಮೇಲೆ ತೆಗೆದುಕೊಳ್ಳಿ.

ಅಧ್ಯಕ್ಷರು : ನೀವು ಆರಂಭಿಸಿದ ಮೇಲೆ ಪೂರೈಸಬೇಕಲ್ಲ?

ಶ್ರೀ ಆರ್.ಅಶೋಕ್ : ಅವರು ಇಬ್ಬರು ಚರ್ಚೆ ಮಾಡಬೇಕೆಂದು ಹೇಳುತ್ತಿದ್ದಾರೆ, ಆಮೇಲೆ ತೆಗೆದುಕೊಂಡು ಬನ್ನಿ.

ಶ್ರೀ ಆರ್.ವಿ.ದೇಶಪಾಂಡೆ : ಚರ್ಚೆ ಮಾಡಬೇಕೆಂದರೆ, I have to allow. ನಾನು ಅದಕ್ಕೆ ಅಡ್ಡಿಪಡಿಸುವುದಕ್ಕೆ ಹೋಗುವುದಿಲ್ಲ, ಆದರೆ ಅವರೇ [ಸಿ.ಟಿ.ರವಿ] ಮೂವ್ ಮಾಡಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ : ಚರ್ಚೆ ಮಾಡುವವರು ಮಾಡುತ್ತಾರೆ.

ಅಧ್ಯಕ್ಷರು : ಸಭಾನಾಯಕರು ಹೇಳಿಕೆ ಮಾಡುವರು.

6. ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆ

ವಿಷಯ : ಕಾವೇರಿ ವಿವಾದದ ಟ್ರಿಬ್ಯುನಲ್ ಐತೀರ್ಪಿಗೆ ಸಂಬಂಧಿಸಿದಂತೆ Supervisory Committee ಸಭೆ ಬಗ್ಗೆ.

ಶ್ರೀ ಸಿದ್ದರಾಮಯ್ಯ [ಮುಖ್ಯಮಂತ್ರಿಗಳು] : ಮಾನ್ಯ ಅಧ್ಯಕ್ಷರೆ, ಕಾವೇರಿ ವಿವಾದದ Tribunal ಐತೀರ್ಪು ಕೊಟ್ಟ ಮೇಲೆ 5-6 ವರ್ಷಗಳ ನಂತರ ಈಗ Inter State Water Dispute Act Section 6ರ ಕೆಳಗಡೆ ನೋಟಿಫಿಕೇಷನ್ ಆಗಿದೆ. ಅದಾದ ಮೇಲೆ ಸುಪ್ರೀಂ ಕೋರ್ಟಿನಲ್ಲಿ ನಾವು ಸೆಕ್ಷನ್ 1ಎ ಕೆಳಗಡೆ Board ಮಾಡಬಾರದೆಂದು ನಮ್ಮ ರಾಜ್ಯ ಸರ್ಕಾರದ ವತಿಯಿಂದ ವಾದವನ್ನು ಮಂಡನೆ ಮಾಡಿದ ಮೇಲೆ ಸುಪ್ರೀಂ ಕೋರ್ಟಿನವರು ತಾತ್ಕಾಲಿಕವಾಗಿ ಒಂದು Supervisory Committee ಮಾಡಬೇಕೆಂದು ಕೇಂದ್ರ ಸರ್ಕಾರಕ್ಕೆ ಒಂದು ಆದೇಶವನ್ನು ಕೊಟ್ಟಿದ್ದಾರೆ. ಆ Supervisory Committee 1ನೇ ತಾರೀಖು ಸಭೆ ಇತ್ತು, ಆ ಸಭೆಯಲ್ಲಿ 4 ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳು ಸದಸ್ಯರಾಗಿರುತ್ತಾರೆ, ಕೇಂದ್ರದ ಜಲಸಂಪನ್ಮೂಲ ಕಾರ್ಯದರ್ಶಿಗಳು ಅಧ್ಯಕ್ಷರಾಗಿರುತ್ತಾರೆ, Central Water Commission ಅಧ್ಯಕ್ಷರೂ ಕೂಡ ಒಬ್ಬ ಸದಸ್ಯರಾಗಿರುತ್ತಾರೆ. ಆ ಕಮಿಷನಿನ Chief

Engineer ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ. ತಾತ್ಕಾಲಿಕವಾಗಿ ಮಾಡಿರುವ ಒಂದು Supervisory Committee ಈ ಸಮಿತಿ 1ನೇ ತಾರೀಖು ಸಭೆ ಕರೆದಿದ್ದರು, ನಮ್ಮ ಮುಖ್ಯ ಕಾರ್ಯದರ್ಶಿಯವರು ಅದರ ಸದಸ್ಯರಾಗಿದ್ದು, ಆ ಸಭೆಯನ್ನು attend ಮಾಡಿ, ಅಲ್ಲಿ ಅವರು ಕೆಲವು ಅಜೆಂಡಾ ಮಾಡಿದ್ದರು. ಆ ಅಜೆಂಡಾಕ್ಕೆ ನಮ್ಮ ರಾಜ್ಯದ comments, ನಿಲುವು ತಿಳಿಸುವುದಕ್ಕೆ ಸಮಯ ಕೇಳಿದ್ದು, ಆ ಸಮಯ 12ನೇ ತಾರೀಖಿಗೆ ಹೋಗಿದೆ. ನಮ್ಮ ರಾಜ್ಯದ ಮತ್ತು ರೈತರ ಹಿತದೃಷ್ಟಿಯಿಂದ ನಮ್ಮ ನಿಲುವೇನು ಇರಬೇಕು ಎನ್ನುವುದರ ಬಗ್ಗೆ ಇವತ್ತಿನ ದಿವಸ Floor Leaders ಸಭೆ ಕರೆಯಲಾಗಿತ್ತು, ಆ ಸಭೆಯಲ್ಲಿ ಏನಾಯಿತೆನ್ನುವುದರ ಬಗ್ಗೆ ಒಂದು ಹೇಳಿಕೆಯನ್ನು ಇಲ್ಲಿ ನಾನು ಮಾಡುತ್ತಿದ್ದೇನೆ. ಇತ್ತೀಚೆಗೆ ದೆಹಲಿಯಲ್ಲಿ ನಡೆದ ಕಾವೇರಿ ಮೇಲ್ವಿಚಾರಣ ಸಮಿತಿಯ ಪ್ರಕಟಿತ ನಡಾವಳಿ ಬಗ್ಗೆ ರಾಜ್ಯ ಸರ್ಕಾರ ಈಗಾಗಲೇ ತನ್ನ ಆಕ್ಷೇಪಣೆಯನ್ನು ಸಲ್ಲಿಸಿದೆ. ಈ ಹಿನ್ನೆಲೆಯಲ್ಲಿ ಜೂನ್‌ನಲ್ಲಿ ನಡೆಯಲಿರುವ 2ನೇ ಸಭೆಯ ಕಾರ್ಯಸೂಚಿಗೆ ಸೂಕ್ತ ಪ್ರತಿಕ್ರಿಯೆ ನೀಡಲು ದಿನಾಂಕ:6.6.2013 ರಂದು ಇವತ್ತು ನನ್ನ ಅಧ್ಯಕ್ಷತೆಯಲ್ಲಿ ಸಭೆ ಕರೆಯಲಾಗಿತ್ತು. ಉಭಯಸದನಗಳ ವಿರೋಧ ಪಕ್ಷದ ನಾಯಕರು, ಜಲ ಸಂಪನ್ಮೂಲ ಸಚಿವರು, ಕಾನೂನು ಸಚಿವರು, ಗ್ರಾಮೀಣಾಭಿವೃದ್ಧಿ ಸಚಿವರು, ಮಾಜಿ ಜಲ ಸಂಪನ್ಮೂಲ ಸಚಿವರು, ಕಾವೇರಿ ಕಾನೂನು ಘಟಕದ ಸದಸ್ಯರು ಭಾಗವಹಿಸಿದ್ದ ಈ ಸಭೆಯಲ್ಲಿ ಕೆಳಕಂಡ ನಿರ್ಣಯಗಳನ್ನು ಕೈಗೊಳ್ಳಲಾಗಿದೆ. "ದಿನಾಂಕ:12.06.2013ರಂದು ನಡೆಯಲಿರುವ ಕಾವೇರಿ ಮೇಲುಸ್ತುವಾರಿ ಸಮಿತಿಯ ಎರಡನೇ ಸಭೆಯಲ್ಲಿ ಸದರಿ ಸಮಿತಿಯು Cauvery Monitoring Boardನ ಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳುವುದನ್ನು ಒಪ್ಪಲು ಸಾಧ್ಯವಿಲ್ಲ. ನಮ್ಮ ವಕೀಲರ ಅಭಿಪ್ರಾಯ ಸಹಾ ಇದೇ ಆಗಿರುತ್ತದೆ. ಸದರಿ ಸಮಿತಿಯು ಇದಕ್ಕೆ ವಿರೋಧ ವ್ಯಕ್ತಪಡಿಸಿದರೆ ಸರ್ವೋಚ್ಚ ನ್ಯಾಯಾಲಯದ ಮುಂದೆ ಹೋಗಲಾಗುವುದು. ಕಾವೇರಿ ನ್ಯಾಯಾಧಿಕರಣದ ಅಂತಿಮ ಆದೇಶದ Vol-V, Clause-IXರ ಅಡಿಯಲ್ಲಿ ಆದೇಶವನ್ನು ಪುನರ್ ಪರಿಶೀಲಿಸಲು ಅವಕಾಶವಿದ್ದು, ಅದರಂತೆ ಪುನರ್ ಪರಿಶೀಲಿಸಬೇಕೆಂದು ಕೋರಲಾಗುವುದು."

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಭಾನಾಯಕರು statement ಕೊಟ್ಟಿದ್ದಾರೆ. ಆ ಕಾಪಿ ನಮಗೆ ಕೊಟ್ಟಿಲ್ಲ. ನಾನು ಮಾನ್ಯ ಸಭಾ ನಾಯಕರ ಗಮನಕ್ಕೆ ತರುವುದು ಇಷ್ಟೆ. ಮಾನ್ಯ ಸಭಾನಾಯಕರು ಏನು

ಸದನದಲ್ಲಿ ಹೇಳಿಕೆ ಕೊಟ್ಟಿದಾರೆ, ಕಳೆದ ಬಾರಿ ಮಾನ್ಯ ಸಿದ್ದರಾಮಯ್ಯನವರು ವಿರೋಧ ಪಕ್ಷದ ಸ್ಥಾನದಲ್ಲಿ ಇದ್ದು ಒಂದು ಅಂಶದ ಬಗ್ಗೆ ಬೆಳಕನ್ನು ಚೆಲ್ಲಿದ್ದರು. ಕಾವೇರಿ ಟ್ರಿಬ್ಯುನಲ್‌ನ ಐತೀರ್ಪು ಜಾರಿ ಮಾಡುವುದಕ್ಕೆ ರಾಜ್ಯ ಸರ್ಕಾರವೇ ಒಪ್ಪಿದೆ. ಸುಪ್ರೀಂ ಕೋರ್ಟಿನ ಮುಂದೆ ರಾಜ್ಯವನ್ನು ಪ್ರತಿನಿಧಿಸುತ್ತಿದ್ದ ನಾರಿಮನ್‌ರವರು ಅವರು ಸುಪ್ರೀಂ ಕೋರ್ಟಿನ ಮುಂದೆ ಟ್ರಿಬ್ಯುನಲ್ ಆರ್ಡರ್ implement ಮಾಡುವುದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ ಎನ್ನುವ ಅಂಶವನ್ನು ಹೇಳಿದ್ದರು ಅದನ್ನು ನೀವು ಹಾಗೂ ಕಾನೂನು ಸಚಿವರಾದ ಮಾನ್ಯ ಜಯಚಂದ್ರರವರು ಇಲ್ಲಿ ಉಪನಾಯಕರಾಗಿ ಈ ಕಡೆ ಇದ್ದರು, ಆಗ ಅವರ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು. ಅದನ್ನು ನಾನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ. ಅದನ್ನೇ ನಾನು ಇವತ್ತು ಹೇಳುವುದು. ಏಕೆಂದರೆ, ಹಿಂದಿನ ಸರ್ಕಾರ ತಪ್ಪು ಮಾಡಿರಬಹುದು. ನಾರಿಮನ್‌ರವರು ತಪ್ಪು ಮಾಡಿದ ಪ್ರತಿಫಲ ಇವತ್ತು ನಮಗೆ ಏಟಾಗಿದೆ ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು. ನಾನು ನಾರಿಮನ್ ಬಗ್ಗೆ ಹೇಳುತ್ತಿಲ್ಲ. ಇವತ್ತು ನಮ್ಮ ಎರಡು SLP ಬಾಕಿ ಇವೆ. ಇದನ್ನು ತಾವು ಪುನರ್ ಪರಿಶೀಲನೆ ಮಾಡಬೇಕಾಗುತ್ತದೆ. ನಾನು ನಿಮ್ಮ ತೀರ್ಪಿನ ಬಗ್ಗೆ ಚಕಾರ ಎತ್ತುತ್ತಿಲ್ಲ. ಸರ್ಕಾರಕ್ಕೆ ಈಗಲೂ ಕಾಲ ಮಿಂಚಿಲ್ಲ. ಎರಡು ಐತೀರ್ಪು ಎರಡು ರಿಟ್ ಪೆಟಿಷನ್‌ಗಳು ಏನಿವೆ, SLP ಗೆ ತೊಂದರೆಯಾಗಬಾರದು. ರಾಜ್ಯವನ್ನು ಪ್ರತಿನಿಧಿಸುತ್ತಿದ್ದವರು ತಪ್ಪು ಮಾಡಿದ್ದಾರೆ ಎನ್ನುವ ಅಭಿಪ್ರಾಯವನ್ನು ಮಾನ್ಯ ಸಿದ್ದರಾಮಯ್ಯನವರು ಹಾಗೂ ಕಾನೂನು ಸಚಿವರು ವ್ಯಕ್ತಪಡಿಸಿದ್ದರು. ಈ ಆದೇಶ ಬಂದಿರುವುದರಿಂದ ನಮಗೆ ಅನುಕೂಲವಾಗುತ್ತದೆ. ನಾವು ಡ್ಯಾಂಗಳನ್ನು ಕಟ್ಟಿ ಇನ್ನೂ ಹೆಚ್ಚಿನ ರೀತಿಯಲ್ಲಿ ಮಾಡಬಹುದು ಎಂದು ಮಾನ್ಯ ಜಯಚಂದ್ರರವರು ಅವತ್ತು ಹೇಳಿದ್ದರು. ನಮ್ಮ ರಾಜ್ಯದಲ್ಲಿ ಕೆಲವರು ಕಾನೂನು ತಜ್ಞರು ಇದ್ದಾರೆ.

ಅಧ್ಯಕ್ಷರು : ಉತ್ತರ ಹೇಳುವಾಗ ಹೇಳುತ್ತಾರೆ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ವೆಂಕಟಾಚಲಯ್ಯನವರು ಇದ್ದಾರೆ, ಅವರೆಲ್ಲರ ಅಭಿಪ್ರಾಯವನ್ನು ತೆಗೆದುಕೊಳ್ಳಿ. ಮಾನ್ಯ ಚಲುವರಾಯ-ಸ್ವಾಮಿಯವರು ಮಂಡ್ಯದಿಂದ ಪ್ರತಿನಿಧಿಸುತ್ತಿದ್ದಾರೆ. ಅವರೂ ಮಾಜಿ ಮಂತ್ರಿಗಳಾಗಿದ್ದರು. ನಮ್ಮನ್ನೂ ಕರೆದರೆ ನಮ್ಮ ಅಭಿಪ್ರಾಯಗಳನ್ನು ಹೇಳುತ್ತೇವೆ. ಮಾನ್ಯ ಕುಮಾರಸ್ವಾಮಿಯವರು ರಾಮನಗರದಿಂದ ಆಯ್ಕೆಯಾಗಿದ್ದಾರೆ. ಕುಮಾರಸ್ವಾಮಿಯವರು ಕಾವೇರಿ ಬೇಸಿನ್‌ನಿಂದ ಬಂದಿದ್ದಾರಾ? ನಾವೂ ನಮ್ಮ ಅಭಿಪ್ರಾಯವನ್ನು ತಿಳಿಸುತ್ತೇವೆ.

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಹೇಳಿದ್ದೇನೆ. ಇದು ಇವತ್ತು floor leader ಗಳ ಸಭೆ ಕರೆದು ಆ ಸಭೆಯಲ್ಲಿ ನಡೆದಂತಹ ನಡವಳಿಕೆ. ಅದನ್ನು ನಾನು ಹೇಳಿಕೆ ಮಾಡಿದ್ದೇನೆ. ಮಾನ್ಯ ಕುಮಾರಸ್ವಾಮಿಯವರು ಬೇರೆ ವಿಚಾರಗಳನ್ನು ಏನು ಪ್ರಸ್ತಾಪ ಮಾಡಿದ್ದಾರೆ, ಮತ್ತು ಮಾನ್ಯ ರೇವಣ್ಣರವರು ಏನು ಪ್ರಸ್ತಾಪ ಮಾಡಿದ್ದಾರೆ, ನಾನು ಮಾನ್ಯ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯಕ್ಕೆ ಉತ್ತರ ಕೊಡುವಾಗ ಅವರ ಎಲ್ಲಾ ಪ್ರಶ್ನೆಗಳಿಗೂ ಕೂಡ ಸಮರ್ಥವಾದ ಉತ್ತರ ಕೊಡುತ್ತೇನೆ.

ಶ್ರೀ ಎನ್.ಚಲುವರಾಯಸ್ವಾಮಿ : ಮಾನ್ಯ ಅಧ್ಯಕ್ಷರೆ, ನಾವು ಉತ್ತರ ಕೇಳುತ್ತಿಲ್ಲ, ನಮ್ಮ ಭಾಗದ ಸೀರಿಯಸ್ ಸಮಸ್ಯೆ ಇದ್ದಾಗ ನಮ್ಮನ್ನೂ ಕರೆಯಿರಿ ಎಂದು ಹೇಳಿದರು.

ಶ್ರೀ ಸಿದ್ದರಾಮಯ್ಯ : ಇನ್ನು ಮುಂದೆ ಸರ್ವ ಪಕ್ಷಗಳ ಸಭೆಗೆ ಮಾನ್ಯ ರೇವಣ್ಣರವರನ್ನೂ ಕರೆಯುವುದಕ್ಕೆ ಏರ್ಪಾಡು ಮಾಡೋಣ.

ಶ್ರೀ ವೈ.ಎಸ್.ವಿ.ದತ್ತ : ಮಾನ್ಯ ಮುಖ್ಯಮಂತ್ರಿಗಳೆ, ಮೀಟಿಂಗ್‌ಗಳಿಗೆ ಮಾನ್ಯ ರೇವಣ್ಣರವರಿಗೆ ಒಬ್ಬರಿಗೆ ಕರೆದರೆ ನಿಮ್ಮ ಅರ್ಧ ಸಮಸ್ಯೆ ಪರಿಹಾರ ಆಗುತ್ತದೆ. ನಿಮ್ಮ ತಲೆ ನೋವು ಕಡಿಮೆಯಾಗುತ್ತದೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಕುಮಾರಸ್ವಾಮಿಯವರೆ, ನೀವು ಸಮರ್ಥವಾಗಿ ಕಾವೇರಿ ಜಲಾನಯನ ಪ್ರದೇಶವನ್ನು represent ಮಾಡುತ್ತಿಲ್ಲವೆಂದು ಅವರು ಹೇಳುತ್ತಿದ್ದಾರೆ.

ಶ್ರೀ ಹೆಚ್.ಡಿ.ರೇವಣ್ಣ : ನಾನು ಆ ತರಹ ಹೇಳಲಿಲ್ಲ.

ಶ್ರೀ ಸಿದ್ದರಾಮಯ್ಯ : ಮಾನ್ಯ ಕುಮಾರಸ್ವಾಮಿಯವರೆ, ನೀವು ಬಜೆವಾಗ ಅವರನ್ನೂ ಕರೆದುಕೊಂಡು ಬನ್ನಿ. ಇಲ್ಲದೆ ಇದ್ದರೆ ನಿಮಗೇ ತೊಂದರೆಯಾಗುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ,...

ಅಧ್ಯಕ್ಷರು : ನಾನು ಮಾನ್ಯ ಶೆಟ್ಟರ್‌ರವರನ್ನು ಕರೆದಿದ್ದೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ಒಂದು ಪ್ರಮುಖವಾದ ವಿಷಯವನ್ನು ನಾನು ನಿಮ್ಮ ಬಳಿ ಬಂದು ಪ್ರಸ್ತಾಪ ಮಾಡಿದ್ದೇನೆ.

ಅಧ್ಯಕ್ಷರು : ಖಂಡಿತ ಅವಕಾಶ ಕೊಡುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ಶೂನ್ಯ ವೇಳೆಯಲ್ಲಿ KPSC ಬಗ್ಗೆ ಪ್ರಸ್ತಾಪ ಮಾಡಬೇಕೆಂದು ಹೇಳಿದ್ದೆ. ಎರಡು ನಿಮಿಷ ಅವಕಾಶ ಕೊಡಿ.

ಅಧ್ಯಕ್ಷರು : ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ನಾಲ್ಕೈದು ವಿಷಯಗಳು ಇವೆ. ಮಾನ್ಯ ಜಗದೀಶ್ ಶೆಟ್ಟರ್‌ರವರು ಅವಕಾಶ ಮಾಡಿ ಕೊಟ್ಟರೆ 10 ನಿಮಿಷದಲ್ಲಿ ಪೂರೈಸಬಹುದು.

ಶ್ರೀ ಜಗದೀಶ್ ಶೆಟ್ಟರ್ : ಮತ್ತೆ ಬೇರೆ ಯಾವುದೂ ಚರ್ಚೆಗೆ ತೆಗೆದುಕೊಳ್ಳಕೂಡದು.

ಅಧ್ಯಕ್ಷರು : ಆಯಿತು.

7. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ :–

ವಿಷಯ : KPSC ನೇಮಕಾತಿ ಸಂದರ್ಶನದಲ್ಲಿ ನಡೆದಿರುವ ಅವ್ಯವಹಾರ ಕುರಿತು.

ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಅಧ್ಯಕ್ಷರೆ, KPSC ಯಲ್ಲಿ ನಡೆದಿರುವಂತಹ KAS ಅಧಿಕಾರಿಗಳ ನೇಮಕಾತಿ ಸಂದರ್ಶನದ ನೆಪದಲ್ಲಿ ಅಕ್ರಮವೆಸಗುತ್ತಿರುವ ಹಾಗೂ ಸ್ವಜನ ಪಕ್ಷಪಾತ, ವ್ಯಾಪಕ ಭ್ರಷ್ಟಾಚಾರ ನಡೆದಿರುವ ಕುರಿತು ನಾನು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ. ಮಾನ್ಯ ಅಧ್ಯಕ್ಷರೆ, ಡಾ: ಮೈಥಿಲಿ, HPS,MBBS, MD., ಮಕ್ಕಳ ತಜ್ಞರು, ಬೆಂಗಳೂರು, ಇವರು ಒಂದು ದೂರನ್ನು 24.05.2013 ರಂದು ಬೆಳಿಗ್ಗೆ 10.00 ಗಂಟೆಗೆ ಖುದ್ದಾಗಿ ಒಂದು, "ಕರ್ನಾಟಕ ಲೋಕಸೇವಾ ಆಯೋಗವು ಅಭ್ಯರ್ಥಿಗಳ ಆಯ್ಕೆಯಲ್ಲಿ ಮೆರಿಟ್ ಪರಿಗಣಿಸದೆ ಅನ್ಯಾಯ ಅಕ್ರಮ ನಡೆಸುತ್ತಿದ್ದು KPSC ಯಲ್ಲಿ ಇತ್ತೀಚೆಗೆ ನಡೆಸಿದ ಗೆಜೆಟೆಡ್ ಪ್ರೊಬೇಷನರ್ಸ್ ಮುಖ್ಯ ಪರೀಕ್ಷೆಯಲ್ಲಿ ನಾನು 1009 ಅಂಕ ಪಡೆದು ಪರಿಶಿಷ್ಟ ಪಂಗಡದ ಮಹಿಳೆಯರ ಪೈಕಿ ರಾಜ್ಯದಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಅಭ್ಯರ್ಥಿಯಾಗಿರುತ್ತೇನೆ. ನನ್ನ ನಂತರದ ಎರಡನೇ ಸ್ಥಾನದಲ್ಲಿ ಅಂಕ ಪಡೆದವರು 937.5 ಅಂಕ ಪಡೆದು ನನಗಿಂತ 72.5 ಅಂಕ ಕಡಿಮೆ ಪಡೆದಿರುತ್ತಾರೆ. ಈ ಬಾರಿ ಪರೀಕ್ಷೆಯಲ್ಲಿ ಎಸ್.ಟಿ.ಪಂಗಡದ ಮಹಿಳೆಯರಿಗಾಗಿ ಒಂದು ಸ್ಥಾನ Assistant Commissioner ಹುದ್ದೆಗೆ ಮೀಸಲಾಗಿರುತ್ತದೆ. ಮೆರಿಟ್ ಪರಿಗಣಿಸಿದಲ್ಲಿ ಈ ಹುದ್ದೆಗೆ ಆಯ್ಕೆಯಾದ ನಾನು ಎಲ್ಲಾ ರೀತಿಯಲ್ಲಿ ಅರ್ಹಳಾಗಿರುತ್ತೇನೆ. ಮೇ 10 ರಂದು ನನ್ನ ಸಂದರ್ಶನ ನಡೆಯಿತು. ಆದರೆ ದುರಂತದ ಸಂಗತಿ ಎಂದರೆ, ಲೋಕಸೇವಾ ಆಯೋಗವು ನಡೆಸಿದ ವ್ಯಕ್ತಿತ್ವ ಪರೀಕ್ಷೆಯ ಸಂದರ್ಶನದಲ್ಲಿ 1009 ಅಂಕ ಪಡೆದ ನನಗೆ 75 ಅಂಕ ನೀಡಿ,